SC. No.165-2022
ಪಿಡಬ್ಲ್ಯೂ-16
ದಿಃ 27-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
ಸಾಕ್ಷಿಯ ವಿಚಾರಣೆಯನ್ನು ವಿಸಿ ಮೂಲಕ ತೆಗೆದುಕೊಳ್ಳಲಾಯಿತು.
ಮುಂದುವರೆದ ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ತದನಂತರ ಅದೇ ದಿನ ಫ್ರಾ.ಸಾ.8 ಮತ್ತು 9 ರವರಿಗೆ ನಿ.ಪಿ.15 ಮತ್ತು 21 ರಂತೆ ನೋಟೀಸನ್ನು ನೀಡಿ ಠಾಣೆಗೆ ಬರಮಾಡಿಕೊಂಡು ಅವರ ಸಮಕ್ಷಮ ಆರೋಪಿತರು ಹಾಜರುಪಡಿಸಿದ ಒಂದು ಬೈಕನ್ನು ನಿ.ಪಿ.16 ಪಂಚನಾಮೆಯಡಿಯಲ್ಲಿ ವಶಕ್ಕೆ ಪಡೆದಿರುತ್ತೇನೆ. ಆ ಸಮಯದಲ್ಲಿ ನಿ.ಪಿ.4 ರಂತೆ ಪೋಟೋ ತೆಗೆಯಲಾಗಿರುತ್ತದೆ. ನಿ.ಪಿ.15, 16 ಮತ್ತು 21 ರಲ್ಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿ.ಪಿ.15(ಬಿ), 16(ಸಿ) ಮತ್ತು 21(ಬಿ) ಎಂದು ಗುರುತಿಸಲಾಯಿತು. ಅಲ್ಲದೇ ವಶಕ್ಕೆ ಪಡೆದುಕೊಂಡು ಮೋಟಾರ್ ಸೈಕಲನ್ನು ಪಿಎಫ್ ಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ದಿನ ರಾತ್ರಿಯಾದ ಕಾರಣ ಆರೋಪಿತರನ್ನು ಠಾಣೆಯಲ್ಲಿ ಸೂಕ್ತ ಭದ್ರಿಕೆಯಲ್ಲಿ ಇಟ್ಟಿರುತ್ತೇನೆ.

ನಂತರ ದಿಃ 17-10-2020 ರಂದು ಆರೋಪಿತರನ್ನು ಕೂಲಂಕುಷವಾಗಿ ವಿಚಾರಿಸಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಸದರಿಯವರು ತಮ್ಮ ಹೇಳಿಕೆಗಳಲ್ಲಿ " ನನ್ನ ಜೊತೆ ಬಂದರೆ ನಾನು ಚಾಕುವನ್ನು ಖರೀದಿ ಮಾಡಿದ ಸ್ಟೋರ್ ಹಾಗೂ ಚಾಕುವನ್ನು ಬಿಸಾಕಿರುವ ಜಾಗವನ್ನು ತೋರಿಸುತ್ತೇನೆ " ಎಂದು ಹೇಳಿರುತ್ತಾರೆ. ಸದರಿ ಹೇಳಿಕೆಯ ಭಾಗಗಳನ್ನು ಕ್ರಮವಾಗಿ ನಿ.ಪಿ.34 ಮತ್ತು 35 ಎಂದು ಗುರುತಿಸಲಾಯಿತು.

ತದನಂತರ ಫ್ರಾ.ಸಾ.11 ರವರನ್ನು ಠಾಣೆಗೆ ಬರಮಾಡಿಕೊಂಡು ಘಟನಾ ಸ್ಥಳಕ್ಕೆ ತೆರಳಿ ಅಲ್ಲಿ ಫ್ರಾ.ಸಾ.8 ಮತ್ತು 9 ರವರು ತೋರಿಸಿದ ಸ್ಥಳದಲ್ಲಿ ನಿ.ಪಿ.18 ರಂತೆ ಪಂಚನಾಮೆಯನ್ನು ಬರೆದು, ನಿ.ಪಿ.19 ಮತ್ತು 20 ರಂತೆ ಪೋಟೋಗಳನ್ನು ತೆಗೆದಿರುತ್ತೇನೆ. ನಿ.ಪಿ.18 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.18(ಡಿ) ಎಂದು

ಗುರುತಿಸಲಾಯಿತು. ಆ ಸಮಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಈಗ ನೋಡುತ್ತಿರುವ ಮು.ಮಾ.8 ಮತ್ತು 10 ನ್ನು ವಶಪಡಿಸಿಕೊಂಡು ಅವುಗಳನ್ನು ಮು.ಮಾ.9 ಮತ್ತು 11 ರಲ್ಲಿ ಇಟ್ಟು ಅರಗು ಸೀಲು ಹಾಕಿ ನನ್ನ ಮತ್ತು ಪಂಚರ ಸಹಿಯುಳ್ಳ ಚೀಟಿಗಳನ್ನು ಅಂಟಿಸಿರುತ್ತೇನೆ. ಮು.ಮಾ.9 ಮತ್ತು 11 ರಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ಮು.ಮಾ.9(ಡಿ) ಮತ್ತು 11(ಡಿ) ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅಲ್ಲದೇ ಆ ಸಮಯದಲ್ಲಿ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿರುತ್ತೇನೆ. ಅದನ್ನು ನಿ.ಪಿ.36 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.36(ಎ) ಎಂದು ಗುರುತಿಸಲಾಯಿತು.

ನಂತರ ಠಾಣೆಗೆ ಪ್ರಾ.ಸಾ.4 ಮತ್ತು ಚಾ.ಸಾ.5 ರವರನ್ನು ಬರಮಾಡಿಕೊಂಡು ಅವರಿಗೆ ನಿ.ಪಿ.12 ಹಾಗೂ ಇನ್ನೊಂದು ನೋಟೀಸನ್ನು ಜಾರಿ ಮಾಡಿರುತ್ತೇನೆ. ನಿ.ಪಿ.12 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.12(ಬಿ) ಎಂದು ಗುರುತಿಸಲಾಯಿತು. ಅಲ್ಲದೇ ಚಾ.ಸಾ.5 ರವರಿಗೆ ನೀಡಿದ ನೋಟೀಸನ್ನು ನಿ.ಪಿ.37 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.37(ಎ) ಎಂದು ಗುರುತಿಸಲಾಯಿತು.

ನಂತರ ಆರೋಪಿತರು ನಮ್ಮನ್ನು ಕೆಟಿಜೆ ನಗರದ ಶಿವಪ್ಪ ಸರ್ಕಲ್ ಬಳಿ ಇರುವ ಎಸ್ ಎಸ್ ಜನರಲ್ ಸ್ಟೋರ್ಸ್ ಬಳಿ ಕರೆದುಕೊಂಡು ಹೋಗಿ ಅಲ್ಲಿ ತಾವು ಒಂದು ಚಾಕುವನ್ನು ಖರೀದಿ ಮಾಡಿರುತ್ತೇವೆ ಎಂದು ತೋರಿಸಿರುತ್ತಾರೆ. ಆ ಸಮಯದಲ್ಲಿ ಸದರಿ ಅಂಗಡಿಯಲ್ಲಿ ಪ್ರಾ.ಸಾ.7 ರವರು ಇದ್ದರು. ನಂತರ ಪ್ರಾ.ಸಾ.7 ರವರ ಹೇಳಿಕೆಯನ್ನು ಪಡೆದುಕೊಂಡು ಸ್ಥಳದಲ್ಲಿ ನಿ.ಪಿ.6 ರಂತೆ ಪಂಚನಾಮೆಯನ್ನು ತಯಾರಿಸಿರುತ್ತೇವೆ. ನಿ.ಪಿ.6 ಕ್ಕೆ ಪ್ರಾ.ಸಾ.7 ರವರು ಕೂಡ ಸಹಿ ಮಾಡಿರುತ್ತಾರೆ. ನಿ.ಪಿ.6 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿ.ಪಿ.7 ಮತ್ತು 8 ರಂತೆ ಪೋಟೋಗಳನ್ನು ತೆಗೆದಿರುತ್ತೇನೆ.

ನಂತರ ಆರೋಪಿತರು ತ್ರಿಶೂಲ್ ಕಂಪರ್ಟ್ಸ್ ನ ಮುಂಭಾಗದ ಬಳಿ ನಮ್ಮನ್ನು ಕರೆದುಕೊಂಡು ಹೋಗಿದ್ದು, ಅಲ್ಲದೇ ಅಲ್ಲಿನ ಒಂದು ಪೊದೆಯ ಒಳಗಡೆ ಚಾಕುವನ್ನು ಬಿಸಾಡಿದ್ದೇವೆ ಎಂದು ಹೇಳಿದ್ದಲ್ಲದೇ ಸದರಿ ಪೊದೆಯಿಂದ ಒಂದು ಚಾಕುವನ್ನು ತೆಗೆದು ನೀಡಿರುತ್ತಾರೆ. ನಂತರ ಸದರಿ ಚಾಕು ಮು.ಮಾ.5 ನ್ನು ವಶಕ್ಕೆ ಪಡೆದು ಅದನ್ನು ಮು.ಮಾ.6 ಚೀಲದಲ್ಲಿ ಇಟ್ಟು ಅರಗು ಸೀಲು ಮಾಡಿ ಅದಕ್ಕೆ ನನ್ನ ಮತ್ತು ಪಂಚ ಸಾಕ್ಷಿದಾರರ ಸಹಿಯುಳ್ಳ ಚೀಟಿ ಅಂಟಿಸಿರುತ್ತೇನೆ. ಮು.ಮಾ.6 ರಲ್ಲಿರುವ ಸಾಕ್ಷಿಯ ಸಹಿಯನ್ನು ಮು.ಮಾ.6(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿ.ಪಿ.9 ರಂತೆ ಪಂಚನಾಮೆಯನ್ನು ಬರೆದು ನಿ.ಪಿ.10 ಮತ್ತು 11 ರಂತೆ ಪೋಟೋಗಳನ್ನು ತೆಗೆಯಿಸಿರುತ್ತೇನೆ. ನಿ.ಪಿ.9 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.5 ನ್ನು ನೋಡಿ ಗುರುತಿಸಿರುತ್ತಾರೆ. ನಂತರ ಮು.ಮಾ.5 ನ್ನು ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಸಾಕ್ಷಿದಾರರಾದ ಪ್ರಾ.ಸಾ.6 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಅವರು ನನ್ನ ಸಮಕ್ಷಮ ನಿ.ಪಿ.14 ರಂತೆ ಹೇಳಿಕೆ ನೀಡಿರುತ್ತಾರೆ. ನಂತರ ಠಾಣೆಗೆ ಪ್ರಾ.ಸಾ.11 ಮತ್ತು 15 ರವರನ್ನು ಬರಮಾಡಿಕೊಂಡು ಅವರಿಗೆ ಆರೋಪಿತರನ್ನು ತೋರಿಸಿದ್ದು, ಅವರು

ಆರೋಪಿತರನ್ನು ಗುರುತಿಸಿದ್ದು, ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಫ್ರಾ.ಸಾ.15 ರವರು ನಿ.ಪಿ.32 ರಂತೆ ನನ್ನ ಸಮಕ್ಷಮ ಹೇಳಿಕೆ ನೀಡಿರುತ್ತಾರೆ. ನಂತರ ಆರೋಪಿತರನ್ನು ರಿಮಾಂಡ್ ವರದಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಸದರಿ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ನಂತರ ದಿಃ 18-10-2020 ರಂದು ಫ್ರಾ.ಸಾ.2 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ನಾನು ಬಂದೋಬಸ್ತ್ ಕರ್ತವ್ಯಕ್ಕೆ ಹೊರಗಡೆ ಹೋಗಿದ್ದು, ಆಗ ನನ್ನ ಪ್ರಭಾರದಲ್ಲಿ ಇದ್ದ ಫ್ರಾ.ಸಾ.14 ರವರು ತನಿಖೆ ಮುಂದುವರೆಸಿದ್ದು, ತದನಂತರ ನಾನು ಪುನಃ ಕಡತ ಪಡೆದುಕೊಂಡಿದ್ದು, ನಂತರ ವಶಪಡಿಸಿಕೊಂಡಿದ್ದ ಮುದ್ದೆಮಾಲುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಕಳುಹಿಸಿಕೊಟ್ಟಿರುತ್ತೇನೆ. ಅಲ್ಲದೇ ದಿಃ 02-11-2020 ರಂದು ಸದರಿ ರಾಸಾಯನಿಕ ವಿಶ್ಲೇಷಣೆಗೆ ವಸ್ತುಗಳನ್ನು ಸಲ್ಲಿಸಿದ ಕುರಿತು ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸ್ವೀಕೃತಿಯನ್ನು ನಿ.ಪಿ.38 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.38(ಎ) ಎಂದು ಗುರುತಿಸಲಾಯಿತು. ನಂತರ ದಿಃ 18-11-2020 ರಂದು ಗಾಯಾಳುವಿನ ಗಾಯದ ಪ್ರಮಾಣ ಪತ್ರ ಕೋರಿ ಮನವಿ ಸಲ್ಲಿಸಿರುತ್ತೇನೆ. ನಂತರ ದಿಃ 23-11-2020 ರಂದು ಎಸ್ ಎಸ್ ಆಸ್ಪತ್ರೆಯಿಂದ ನಿ.ಪಿ.24 ನ್ನು ಪಡೆದುಕೊಂಡು ಅದರ ಮೂಲಪ್ರತಿಯನ್ನು ಚಿಗಟೇರಿ ಆಸ್ಪತ್ರೆಗೆ ಮುಂದಿನ ಮಾಹಿತಿಗಾಗಿ ಕಳುಹಿಸಿಕೊಟ್ಟಿರುತ್ತೇನೆ. ನಿ.ಪಿ.24 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.24(ಎ) ಎಂದು ಗುರುತಿಸಲಾಯಿತು.

ನಂತರ ದಿಃ 26-11-2020 ರಂದು ಚಿಗಟೇರಿ ಆಸ್ಪತ್ರೆಯಿಂದ ನಿ.ಪಿ.23 ರಂತೆ ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಿ.ಪಿ.23 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.23(ಬಿ) ಎಂದು ಗುರುತಿಸಲಾಯಿತು. ನಂತರ ದಿಃ 05-12-2020 ರಂದು ನ್ಯಾಯಾಲಯದ ಆದೇಶದಂತೆ ಚಾ.ಸಾ.8 ಮತ್ತು 9 ರವರನ್ನು ಬರಮಾಡಿಕೊಂಡು ಅವರಿಗೆ ನೋಟೀಸನ್ನು ನೀಡಿ ಮು.ಮಾ.7 ನ್ನು ಬಿಡುಗಡೆ ಮಾಡಿರುತ್ತೇನೆ. ಸದರಿ ಸಮಯದಲ್ಲಿ ನೀಡಲಾದ ಎರಡು ನೋಟೀಸು, ಪಂಚನಾಮೆ ಹಾಗೂ ಫೋಟೋಗಳನ್ನು ಕ್ರಮವಾಗಿ ನಿ.ಪಿ.39, 40, 41, 42, 43 ಮತ್ತು 44 ಎಂದು ಗುರುತಿಸಲಾಯಿತು. ನಿ.ಪಿ.39 ರಿಂದ 41 ರಲ್ಲಿ ಇರುವ ಸಾಕ್ಷಿಯ ಸಹಿಗಳನ್ನು ನಿ.ಪಿ.39(ಎ) ದಿಂದ ನಿ.ಪಿ.41(ಎ) ಎಂದು ಗುರುತಿಸಲಾಯಿತು.

ದಿಃ 12-02-2021 ರಂದು ನಿ.ಪಿ.27 ಮತ್ತು 28 ನ್ನು ರಾಸಾಯನಿಕ ವಿಶ್ಲೇಷಣಾ ತಜ್ಞರಿಂದ ಪಡೆದುಕೊಂಡಿರುತ್ತೇನೆ. ನಿ.ಪಿ.27 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.27(ಬಿ) ಎಂದು ಗುರುತಿಸಲಾಯಿತು. ನಂತರ ದಿಃ 16-02-2021 ರಂದು ವಶಪಡಿಸಿಕೊಂಡ ಮು.ಮಾ.5 ನ್ನು ಪರಿಶೀಲಿಸಿ ಅಂತಿಮ ಅಭಿಪ್ರಾಯ ನೀಡುವಂತೆ ಮನವಿಯನ್ನು ಸಲ್ಲಿಸಿ ನಂತರ ನಿ.ಪಿ.25 ರಂತೆ ಅಂತಿಮ ಅಭಿಪ್ರಾಯವನ್ನು ಪಡೆದುಕೊಂಡಿರುತ್ತೇನೆ. ಸದರಿ ಮನವಿಯನ್ನು ನಿ.ಪಿ.42 ಎಂದು ಹಾಗೂ ನಿ.ಪಿ.25 ಮತ್ತು 42 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ.ಪಿ.25(ಬಿ) ಹಾಗೂ 42(ಎ) ಎಂದು ಗುರುತಿಸಲಾಯಿತು. ಅಲ್ಲದೇ ಆ ಪೂರ್ವದಲ್ಲಿ ಚಾ.ಸಾ.20 ರವರಿಂದ ನಿ.ಪಿ.29 ರಂತೆ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ನಿ.ಪಿ.29 ರಲ್ಲಿರುವ ಸಾಕ್ಷಿಯ ಸಹಿಯನ್ನು

ನಿ.ಪಿ.29(ಎ) ಎಂದು ಗುರುತಿಸಲಾಯಿತು. ಅಲ್ಲದೇ ದಿಃ 21-04-2021 ರಂದು ಫ್ರಾ.ಸಾ.3 ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಅವರು ನನಗೆ ನಿ.ಪಿ.5 ರಂತೆ ಹೇಳಿಕೆ ನೀಡಿರುತ್ತಾರೆ. ಅಲ್ಲದೇ ಅವರ ಅಂಗಡಿಯಲ್ಲಿ ಫ್ರಾ.ಸಾ.1 ರವರು ಕೆಲಸ ಮಾಡುತ್ತಿರುವ ಕುರಿತಾಗಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿ.ಪಿ.43 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.43(ಎ) ಎಂದು ಗುರುತಿಸಲಾಯಿತು. ಅಲ್ಲದೇ ಫ್ರಾ.ಸಾ.1 ರವರನ್ನು ಲ್ಯಾಬ್ ಗೆ ಕರೆದುಕೊಂಡು ಹೋಗಿ ಅವರ ರಕ್ತದ ಗುಂಪನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಯನ್ನು ನಿ.ಪಿ.44 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.44(ಎ) ಎಂದು ಗುರುತಿಸಲಾಯಿತು. ನಂತರ ತನಿಖೆ ಪೂರ್ಣಗೊಂಡಿದ್ದು, ಆರೋಪಿತರ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

(ಈ ಹಂತದಲ್ಲಿ ಸಾಕ್ಷಿಯ ಬಳಿ ಮೂಲ ಕಡತಗಳು ಇಲ್ಲದೇ ಇರುವುದು ಕಂಡುಬಂದಿದ್ದು, ಇಂತಹ ಗಂಭೀರ ಪ್ರಕರಣದಲ್ಲಿಯೂ ಎರಡನೇ ಬಾರಿ ಸಾಕ್ಷಿಯು ಮೂಾಲ ಕಡತಗಳಿಲ್ಲದೇ ಸಾಕ್ಷಿ ನುಡಿಯುತ್ತಿರುವುದು ಕಂಡುಬಂದಿದ್ದು, ಪಾಟೀಸವಾಲಿನ ವೇಳೆಯಲ್ಲಿ ಮೂಲ ಕಡತಗಳು ಅವಶ್ಯ ಎಂದು ಈ ಹಂತದಲ್ಲಿ ನ್ಯಾಯಾಲಯದ ಗಮನಕ್ಕೆ ಬಂದಿದ್ದು, ಆ ಕಾರಣ ಸಾಕ್ಷಿಗೆ ಮುಂದಿನ ಹಂತದಲ್ಲಿ ಮೂಲ ಕಡತಗಳನ್ನು ಪಡೆದುಕೊಂಡು ಪಾಟೀಸವಾಲಿಗೆ ಉತ್ತರಿಸಬೇಕು ಎಂಬ ಆದೇಶದೊಂದಿಗೆ ಪಾಟೀಸವಾಲನ್ನು ಮುಂದೂಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.